ಕವಿತೆ



ಜ.ನಾ. ತೇಜಶ್ರೀ

ಕಲೆ: ನಂಜುಂಡಸ್ವಾಮಿ



# ಕನ್ನೆಮರಿಯೂ, ತಾಯಿಹಕ್ಕಿಯೂ

ಹೆಚ್ಚನ್ನು ಮೀರಿಸುವ
ಈ ಹೆಚ್ಚಿನ ರಹಸ್ಯವನು
ಏನೆನ್ನುವುದು ಪರಮಪದವೆ?

ಈಗಷ್ಟೆ ಅಚಾನಕು
ಟೊಂಗೆಯಿಂದ ಕಳಚಿ ಬಿದ್ದ
ಗೂಡೊಳಗಿನ ಕನ್ನೆಮರಿ ನಾನು,
ಬಿದ್ದಿದ್ದೇವೆ ನಾನೂ ಗೂಡೂ ಅದ್ದೇಗೋ
ನಿನ್ನಂಗೈಯೊಳಗೆ ಜೀವಸಮೇತ

ನಿನ್ನ ತಾಯ್ರೆಕ್ಕೆಗಳು
ಇನ್ನೂ ರೆಕ್ಕೆ ಬಲಿಯದ, ಇನ್ನೂ ಕಣ್ಬಿಡದ
ಕುರುಡು ಪಿಳ್ಳೆಯ ಕಂವುಚಿ
ಮುದ್ದಿಸುತ್ತವೆ ಪರಮಸುಖವೆಂಬಂತೆ

ಇದುವೆ ನೆಮ್ಮದಿ
ಕನ್ನೆಹಕ್ಕಿಯ ಮೈಯೊಳಗೆ ಹಾದು
ಮನದೊಳಗೂ ಬೆಳೆದು
ಗುರುತುಗಳ ಊರುತ್ತಲಿದೆ
ಸೆಗಣಿನೆಲಕ್ಕೆ ಇಟ್ಟ ರಂಗೋಲಿಯಂತೆ.